ಅದಕ್ಕೆ ಶೀಘ್ರ ತುರ್ತಾಗಿ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಅದರಿಂದ ಯಾರೇ ಅಧಿಕಾರಿಗಳಾಗಲಿ, ಯಾವುದೇ ಸಂದರ್ಭದಲ್ಲಾಗಲೀ ಏನಾದರೂ ಈ ರೀತಿಯ ಅಪಾದನೆಗಳು ಬಂದದ್ದು ಇದ್ದರೆ ಅವರನ್ನು ರಕ್ಷಣೆ ಮಾಡತಕ್ಕಂಥ ಪ್ರಶ್ನೆ ಇಲ್ಲ. ನಾವು ತಕ್ಷಣ ಅದನ್ನು ತರಿಸಿ ಆಡಳಿತದ ಎಲ್ಲಾ ರಂಗವನ್ನೂ ಕೂಡ ಚುರುಕುಗೊಳಿಸುತ್ತೇವೆ. ಎಲ್ಲಿ ಭ್ರಷಾಚಾರದ ಪ್ರಕರಣಗಳು ಇವೆ, ಅದನ್ನೆಲ್ಲಾ ಗುರುತಿಸಿ ಎತ್ತಿ ತೆಗೆದು ಆ ಕಡತ ಎಲ್ಲಿ ಮೂಲೆಯಲ್ಲಿ ಇದ್ದರೂ ಕೂಡ ಅದನ್ನು ನಾವು ಎತ್ತಿ ತೆಗೆದು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

2) ದೂರದರ್ಶನದಲ್ಲಿ ವಿಧಾನ ಮಂಡಲದ ಕಾರ್ಯಕಲಾಪಗಳ ಸುದ್ದಿಯ ವೇಳೆಯಲ್ಲಿ ಕಡಿತ

† ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಚಾರ ತಮ್ಮ ಗಮನಕ್ಕೆ ತಂದಿದ್ದೆ. ಈ ದೂರದರ್ಶನದಲ್ಲಿ ನಮ್ಮ 'ವಿಧಾನಮಂಡಲದಲ್ಲಿ ಇಂದು' ಒಂದು ಹತ್ತು ನಿಮಿಷ ಅವಕಾಶ ಕೊಡುತ್ತಿದ್ದರು. ಸುದ್ದಿಯನ್ನು ಪ್ರಚಾರ ಮಾಡುತ್ತಿದ್ದರು. ಇವತ್ತು ಅದು ಎರಡೂವರೆ ನಿಮಿಷಕ್ಕೆ ಇಳಿದಿದೆ. ಬೇರೆ ರಾಜ್ಯಗಳಲ್ಲಿ ಹತ್ತು ನಿಮಿಷ ಇದೆ. ಅದೇನು ಕರ್ನಾಟಕ ರಾಜ್ಯಕ್ಕೆ ಈ ಅನ್ಯಾಯವಾಗಿರುವುದು ಸರಿಯಲ್ಲ. ಒಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತೇನೆ. ಸರ್ಕಾರ ಕೇಂದ್ರದ ಜೊತೆಯಲ್ಲಿ ಮಾತನಾಡಬೇಕು. ಆ ಪ್ರಸಾರ ಮಂತ್ರಿಗಳ ಜೊತೆಯಲ್ಲಿ ತಾವು ಇದನ್ನು ಬಹಳ ಪರಿಣಾಮಕಾರಿಯಾಗಿ ಮಾತನಾಡಬೇಕು. ಇದರ ಜೊತೆಗೆ ನಮ್ಮಲ್ಲಿ ಈಗ ತಮಿಳುನಾಡಿನಲ್ಲಿ ಹಿಂದಿ ಸುದ್ದಿ, ಅದನ್ನು ಸಂಪೂರ್ಣ ರದ್ದುಮಾಡಿದ್ದಾರೆ, ಅದರ ಬದಲು ತಮಿಳುಸುದ್ದಿಯನ್ನು ಪ್ರಸಾರ ಮಾಡುತ್ತಿದ್ದಾರೆ. ನಮ್ಮಲ್ಲಿ ಕೊಡತಕ್ಕಂಥ ಕನ್ನಡ ಪ್ರಾದೇಶಿಕ ಸುದ್ದಿಯಲ್ಲಿ 80 ಭಾಗ ಬೇರೆ ರಾಜ್ಯದ್ದು ಬೇರೆ ಭಾಷೆಗಳ ಸುದ್ದಿಗಳೇ ಬರುತ್ತವೆ. ಕೇಂದ್ರದ್ದು, ಅದು ಇದು ನಮ್ಮಲ್ಲಿ ಎರಡು ನಿಮಿಷ ಅಥವಾ ಒಂದು ನಿಮಿಷ ನಮಗೆ ಸಿಗತಕ್ಕಂಥದ್ದು. ನಾವೂ ಸಹಾ ಆ ಹಿಂದಿಯನ್ನು ವಿರೋಧ ಮಾಡುತ್ತಿಲ್ಲ. ನಮಗೆ ಸುದ್ದಿ ಪ್ರಚಾರ ಜಾಸ್ತಿ ಇರುವುದರಿಂದ ಈ ಪ್ರಾದೇಶಿಕ ಸುದ್ದಿ ಏನು ಒಂದು ಸಾರಿ ನಮಗೆ ಕೊಡುತ್ತಿದ್ದೀರಿ, 7–30 ಗಂಟೆಗೆ ಮತ್ತೊಂದು ಸಾರಿ ಇನ್ನೊಂದು 20 ನಿಮಿಷ ನಮಗೆ ಜಾಸ್ತಿ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕಾದದ್ದು; ಅದನ್ನು ತಾವು ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಬೇಕು. ಮೂರನೆಯ ವಿಚಾರ ತಮ್ಮ ಮೂಲಕ ತರುವುದು ಎಂದರೆ ಲೋಕಸಭೆಯಲ್ಲಿ ನೇರ ಪ್ರಸಾರದಲ್ಲಿ ತಮ್ಮ ಕಾರ್ಯಕಲಾಪಗಳನ್ನು ಪ್ರಚಾರ ಮಾಡುತ್ತಾರೆ. ಒಂದು ಸುದ್ದಿ ಅವರ ದೂರದರ್ಶನ ಮೂಲಕ ಪ್ರಚಾರ ಮಾಡುತ್ತಾರೆ. ನಮ್ಮ ಹಿಂದಿನ ಅಧ್ಯಕ್ಷರಾಗಿದ್ದಂತಹ ಮಾನ್ಯ ಎಸ್.ಎಂ. ಕೃಷ್ಣರವರು ಸಹ ಇದರ ಬಗ್ಗೆ ಒಂದು ಚಿಂತನೆಯನ್ನು ಮಾಡಿದ್ದರು. ಈ ಸಭೆಯನ್ನು ಸಹಿತ ನಾವು ದೂರದರ್ಶನದ ಮೂಲಕ ಪ್ರಚಾರ ಕೊಡತಕ್ಕಂಥ, ಮತ್ತು ದೂರದರ್ಶನದಲ್ಲಿ ತೋರಿಸತಕ್ಕಂಥ ವ್ಯವಸ್ಥೆಯಾಗಬೇಕೆಂದು ಹೇಳಿ ಒಂದು ಚಿಂತನೆ ನಡೆದಿತ್ತು. ಈ ಬಗ್ಗೆ ಅವರು ಕೇಂದ್ರ ಸರ್ಕಾರದ ಜೊತೆಯಲ್ಲಿ ಏನು ಮಾತನಾಡಿದ್ದರೋ ಗೊತ್ತಿಲ್ಲ. ತಮ್ಮನ್ನು ನಾವು ಕಳಕಳಿಯಿಂದ ಮನವಿ ಮಾಡತ್ತೇವೆ. ಲೋಕಸಭೆಯಂತೆ ಈ ಸದನದ ಕಾರ್ಯಕಲಾಪವನ್ನು ಆ ಮಾಧ್ಯಮದ ಮೂಲಕ ಜನರಿಗೆ ತೋರಿಸತಕ್ಕಂಥ ವ್ಯವಸ್ಥೆಯಾಗತಕ್ಕ ಪರಿಸ್ಥಿತಿ ಆದರೆ ಉತ್ತಮ ಮತ್ತು ಜವಾಬ್ದಾರಿಯುತವಾಗುತ್ತದೆ. ಬಹಳ ಸಂತೋಷವಾಗುತ್ತದೆ. ಈ ದೃಷ್ಟಿಯಿಂದ ತಮಗೆ ನಾನು ಏನು ಹೇಳುತ್ತಿದ್ದೇನೆ ಅಂದರೆ ತಾವು ನೇರವಾಗಿ ಕೇಂದ್ರ ಸಚಿವರ ಜೊತೆಯಲ್ಲಿ ಪ್ರಧಾನ ಮಂತ್ರಿಗಳ ಜೊತೆಯಲ್ಲಿ ತಾವು ಮತ್ತು ನಮ್ಮ ಮುಖ್ಯಮಂತ್ರಿಗಳು ಮಾತನಾಡಿ ಪ್ರಚಾರಮಾಡುವಂತೆ ಮಾಡಿ. ಇದರಲ್ಲಿ ಎರಡು ಅನುಕೂಲಗಳು ಆಗುತ್ತವೆ. ಒಂದು ಅನುಕೂಲ ನಮ್ಮ ರಾಜ್ಯದ ಜನತೆಗೆ ಈ ಮಾಧ್ಯಮದ ಮೂಲಕ ನಮ್ಮ ಸದನದಲ್ಲಿ ನಡೆಯತಕ್ಕಂಥ ವಿಚಾರಗಳು ಗೊತ್ತಾಗುತ್ತದೆ. ಮತ್ತೊಂದು ಅತಿ ಮುಖ್ಯವಾಗಿ ತಮಗೆ ಅನುಕೂಲವಾಗುತ್ತದೆ. ಏನೆಂದರೆ, ಈ ಸದನದಲ್ಲಿ ಎಲ್ಲಾ ಸದಸ್ಯರು ಕುಳಿತಿರುತ್ತಾರೆ. ಅತ್ತ ಇತ್ತ ಅಳ್ಳಾಡುವುದಕ್ಕೆ ಆಗುವುದಿಲ್ಲ. ಅದೊಂದು ಬಹಳ ಅತಿ ಮುಖ್ಯವಾದುದು.

ಆ ದೃಷ್ಟಿಯಿಂದಾಲಾದರೂ ತಾವು ಈ ಕೆಲಸವನ್ನು ಮಾಡಬೇಕು. ದೂರದರ್ಶನದಲ್ಲಿ ಕನ್ನಡ ವರದಿಗಾರರು ಸಿಗುವುದೇ ಬಹಳ ಕಷ್ಟ. ಅಲ್ಲಿ ಇಬ್ಬರೊ ಮೂರು ಜನರು ಇದ್ದಾರೆ. ಎಲ್ಲಿಂದಲೋ ಬೇರೆ ವರದಿಗಾರರನ್ನು ಕರೆಯಿಸುತ್ತಾರೆ. ಅವರಿಗೆ ನಮ್ಮ ಕನ್ನಡ ಅರ್ಥವಾಗುವುದಿಲ್ಲ. ಅವರು ಬೇರೆ ಭಾಷೆ ಮಾತನಾಡುತ್ತಾರೆ. ಈ ರೀತಿಯ ಪರಿಸ್ಥಿತಿ ಇದೆ. ವರದಿಗಾರರು ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಇರಬೇಕು. ಮತ್ತು ಅಲ್ಲಿರತಕ್ಕಂಥ ಕೆಲಸಗಾರರ ಸಂಖ್ಯೆಯೂ ಸಹ ನೂರಕ್ಕೆ ಎಂಭತ್ತು ಭಾಗದ ಮೇಲೆ ಕನ್ನಡಿಗರೇ ಇರಬೇಕು ಎನ್ನತಕ್ಕದ್ದನ್ನು ತಮ್ಮ ಮೂಲಕ ಬಹಳ ಅತ್ಯಂತ ವಿನಯದಿಂದ ಹೇಳುತ್ತೇನೆ.

ವಿಧಾನ ಮಂಡಲದಲ್ಲಿ ಇಂದು ಅನ್ನುವುದು 10 ನಿಮಿಷ ಮತ್ತೆ ಬರಲೇಬೇಕು. ಅದರ ಬಗ್ಗೆ ತೀವ್ರವಾದಂತಹ ಕಾಳಜಿಯನ್ನು ಸರ್ಕಾರ ವಹಿಸಬೇಕೆಂದು ತಮ್ಮ ಮೂಲಕ ಹೇಳುತ್ತೇನೆ. ಇದು ನಮ್ಮ ಸರ್ಕಾರದ್ದಲ್ಲ. ಆದರೂ ಸಹ ನೀವು ಕೇಂದ್ರ ಸರ್ಕಾರದವರ ಜೊತೆಯಲ್ಲಿ ಮಾತನಾಡಬೇಕು. ಬೇರೆ ರಾಜ್ಯಕ್ಕೆ ಒಂದು ನೀತಿ, ನಮ್ಮ ರಾಜ್ಯಕ್ಕೆ ಒಂದು ರೀತಿ ಆಗಬಾರದು ಅನ್ನತಕ್ಕ ಮಾತನ್ನು ತಮ್ಮ ಮೂಲಕ ಹೇಳುತ್ತಿದ್ದೇನೆ.

† ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ನಾನು ಧ್ವನಿಗೂಡಿಸಿ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಕೇಂದ್ರ ಸರ್ಕಾರದ ಜೊತೆಯಲ್ಲಿ ತಕ್ಷಣ ತಾವು ಮುಖ್ಯಮಂತ್ರಿಗಳು ವ್ಯವಹರಿಸಬೇಕೆಂದು ಒತ್ತಾಯಮಾಡುತ್ತೇನೆ. ಪ್ರದೇಶ ಸಮಾಚಾರದಲ್ಲಿ ನಿನ್ನೆಯಿಂದ ಮತ್ತೊಂದನ್ನು ಶುರುಮಾಡಿದ್ದಾರೆ. ದೆಹಲಿಯಲ್ಲಿ ಪಾರ್ಲಿಮೆಂಟಿನಲ್ಲಿ ಇಂದು ಮತ್ತು ರಾಜ್ಯ ಸಭೆಯಲ್ಲಿ ಇಂದು ಎಂದು ಹೇಳಿದ್ದಾರೆ. ರಾತ್ರಿ 8.40ರಲ್ಲಿ ಬರತಕ್ಕಂಥ ಹಿಂದಿ ನ್ಯೂಸ್‌ನಲ್ಲಿ 9.40ಕ್ಕೆ ಇಂಗ್ಲೀಷ್‌ನಲ್ಲಿ ಬರತಕ್ಕಂಥ ನ್ಯೂಸ್‌ನಲ್ಲಿ ಬಿಹಾರದಲ್ಲಿ ಏನಾಯಿತು ಉತ್ತರ ಪ್ರದೇಶದಲ್ಲಿ ಏನಾಯಿತು ವೆಸ್ಟ ಬೆಂಗಾಳ್‌ನಲ್ಲಿ ಏನಾಯಿತು ಎಂದು ಹೇಳುತ್ತಾರೆ. ಪ್ರದೇಶ ಸಮಾಚಾರ ಇರತಕ್ಕಂಥದ್ದು ಮುಖ್ಯವಾಗಿ ಪ್ರಾದೇಶಿಕ ಸಮಸ್ಯೆಗಳನ್ನು ಬೀದರ್‌ನಲ್ಲಿ ಏನಾಗಿದೆ ಬೆಳಗಾಂನಲ್ಲಿ ಏನಾಗಿದೆ, ಕೊಡಗಿನಲ್ಲಿ ಏನಾಗಿದೆ ಎನ್ನತಕ್ಕ ವಿಚಾರಗಳನ್ನು ಹೇಳಬೇಕು. ಕರ್ನಾಟಕಕ್ಕೆ ಸಂಬಂಧಪಟ್ಟ ಹಾಗೆ ಲೋಕಸಭೆಯಲ್ಲಿ ಏನು ನಡೆಯಿತು, ರಾಜ್ಯ ಸಭೆಯಲ್ಲಿ ಏನು ನಡೆಯಿತು ಅದು ನಡೆಯಲಿ, ಆದರೆ ಇದರಿಂದಾಗಿ ನಮ್ಮ ಪ್ರದೇಶದ ಸುದ್ದಿಗಳನ್ನು ಪ್ರಚಾರ ಮಾಡಲಿಕ್ಕೂ ಸಹಿತ ತೊಂದರೆಯಾಗಿರತಕ್ಕದ್ದನ್ನು ನಾನು ಖುದ್ದಾಗಿ ನೋಡಿದ್ದೇನೆ. 2–3 ತಿಂಗಳ ಹಿಂದೆ 8.40ಕ್ಕೆ ಹಿಂದಿ ಸುದ್ದಿ ಬರುತ್ತಿತ್ತು. 8.40 ಅನ್ನು 8.30 ಮಾಡಿದಮೇಲೆ ಈ ಸಮಸ್ಯೆ ಪ್ರಾರಂಭವಾಗಿರತಕ್ಕಂಥದ್ದು. ವಿಶೇಷವಾಗಿ ಪ್ರಾದೇಶಿಕ ಸಮಾಚಾರದಲ್ಲಿಯೂ ಸಹಿತ ಬಹಳ ಗಡಿಬಿಡಿ. ನಾವು ಹೇಳತಕ್ಕಂಥ ವಿಚಾರಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡತಕ್ಕಂಥ ವಿಚಾರಗಳನ್ನು ಈ ಸದನದಲ್ಲಿ ಮಾಡತಕ್ಕಂಥ ಹೊಸ ಕಾನೂನುಗಳ ಜನಸಾಮಾನ್ಯರಿಗೆ ತಿಳಿವಳಿಕೆ ಕೊಡತಕ್ಕಂಥ ವಿಚಾರಗಳ ಬಗ್ಗೆ ಗಡಿಬಿಡಿಯಿಂದಾಗಿ ಅವರು ಹೇಳಲಿಕ್ಕೆ ಆಗುತ್ತಿಲ್ಲ. ಸದನದಲ್ಲಿ ಇಂದು ಅಂತ ಹೇಳಿ ನಮ್ಮ ವಿಧಾನ ಸಭೆಯಲ್ಲಿ, ವಿಧಾನ ಪರಿಷತ್ತಿನಲ್ಲಿ ನಡೆಯತಕ್ಕಂಥ ಕಾರ್ಯಕಲಾಪ ಮಟ್ಟ ಯಾವ ಮಟ್ಟಕ್ಕೆ ಬಂದಿದೆ ಅಂದರೆ, ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದರು, ರಾಯರೆಡ್ಡಿಯವರು, ಏಕಾಂತಯ್ಯನವರು, ವಾಟಾಳ್ ನಾಗರಾಜ್‌ರವರು ಸಿಂಧ್ಯರವರು ಮಾತನಾಡಿದರು. ಏನು ಮಾತನಾಡಿದರು ಎಂದು ಹೇಳವುದು ಅವರಿಗೆ ಕಷ್ಟವಾಗಿದೆ. ಒಂದು ಹೆಸರುಗಳನ್ನು ಹೇಳಬೇಕು, ಮಂತ್ರಿಗಳ ಹೆಸರುಗಳನ್ನು ಹೇಳಬೇಕು, ಆದರೆ ವಿಚಾರಗಳನ್ನು ಅಲ್ಲಿ ಪ್ರಸ್ತಾಪಮಾಡಲಿಕ್ಕೆ ತೊಂದರೆಯಾಗುತ್ತಿದೆ. ತಮಿಳುನಾಡಿನಲ್ಲಿ ಹಿಂದಿಯಲ್ಲಿ ಪ್ರಚಾರಗಳು ಯಾವುದೇ ರೀತಿಯಲ್ಲಿ ವಾರ್ತೆಗಳನ್ನು ಸಹಿತ ಅವರು ಪ್ರಚಾರಕ್ಕೆ ಅವಕಾಶ ಇಲ್ಲ. ಅದೆಲ್ಲಾ ಸಮಯವನ್ನು ಸಹಿತ ಅಲ್ಲಿ ಪ್ರಾದೇಶಿಕವಾದ ವಿಚಾರಗಳನ್ನು ತಿಳಿಸಲಿಕ್ಕೆ ನಮಗೆ ಕೊಟ್ಟಿದ್ದಾರೆ ನಮ್ಮ ಮೇಲೆ, ನಮ್ಮ ರಾಜ್ಯದಲ್ಲಿ 10 ನಿಮಿಷ ಇದ್ದುದ್ದನ್ನು ಕಡಿಮೆ ಮಾಡಲಿಕ್ಕೆ

ಕಾರಣವೇನು ? ಇದು ನನಗೆ ಅರ್ಥವಾಗುತ್ತಿಲ್ಲ. ಅದರಿಂದಾಗಿ ತಾವು ದಯವಿಟ್ಟು ''ಸದನದಲ್ಲಿ ಇಂದು'' ಎನ್ನತಕ್ಕ ಕಾರ್ಯಕಲಾಪಗಳು ಏನು ಬರುತ್ತಿತ್ತು ಇದಕ್ಕೆ ಹೆಚ್ಚಿನ ಸಮಯದ ಅವಕಾಶವನ್ನು ಹಿಂದೆ ಇದ್ದಹಾಗೆ ಕೊಡತಕ್ಕಂಥದ್ದರ ಬಗ್ಗೆ ತಾವು ತಕ್ಷಣ ವ್ಯವಹರಿಸಬೇಕೆಂದು ಹೇಳುತ್ತೇನೆ.

ಈ ಸದನದ ಕಾರ್ಯಕಲಾಪಗಳನ್ನು ನೇರವಾಗಿ ಪ್ರಸಾರ ಮಾಡುವುದರ ಬಗ್ಗೆಯೂ ಸಹಿತ ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಆರಿಸಿ ಬಂದಂತಹ ಜನಗಳು ನಾವು ಇಲ್ಲಿ ಏನು ಮಾಡುತ್ತೇವೆ ಎನ್ನುವುದನ್ನು ಜನರು ತಿಳಿದುಕೊಳ್ಳುವುದಕ್ಕೂ ಬಹಳ ಅನುಕೂಲವಾಗುತ್ತದೆ. ಸಾಮಾನ್ಯವಾದ ಜನಕ್ಕೂ ಸಹಿತ ಇಲ್ಲಿಯ ವ್ಯವಹಾರಗಳನ್ನು ತೆಗೆದುಕೊಳ್ಳತಕ್ಕಂಥ ದೃಷ್ಟಿಯಿಂದ ಬಹಳ ಒಳ್ಳೆಯದು ಎಂದು ಹೇಳತ್ತೇನೆ. ಆಲ್ ಇಂಡಿಯಾ ರೇಡಿಯೋದಲ್ಲಿ ಕನ್ನಡದಲ್ಲಿ ವಾರ್ತೆಗಳು ಎಂದು ಕೆಲವು ಸಾರಿ ಪ್ರತಿನಿತ್ಯವೂ ಬರುತ್ತದೆ. ಅದು ಬಿಹಾರಿ ಭಾಷೆಯಲ್ಲೂ ಕಾಶ್ಮೀರಿ ಭಾಷೆಯಲ್ಲೂ ಹೇಳಿದ ಹಾಗೆ ನಮಗೆ ಕೇಳಿಸುತ್ತದೆ. ಅದನ್ನು ಕನ್ನಡ ಅಂತ ಅರ್ಥಮಾಡಿಕೊಳ್ಳುವುದಕ್ಕೆ ನಮಗೆ ಕಷ್ಟವಾಗುತ್ತದೆ. ಏಕೆಂದರೆ ಅವರು ಯಾರೋ ಬೇರೆ ರಾಜ್ಯದವರು ಕನ್ನಡದವರು ಮಾತನಾಡಿದ ಹಾಗೆ ಮಾತನಾಡುತ್ತಾರೆ. ಅದ್ದರಿಂದ ದಯವಿಟ್ಟು ಇದರ ಬಗ್ಗೆಯೂ ಸಹ ತಿಳಿಸಬೇಕು. ಇದನ್ನು ಸರ್ಕಾರ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಬೇಕು. ಈಗ ತತ್‌ಕ್ಷಣವಾಗಿ 'ಸದನದಲ್ಲಿ ಇಂದು' ಕಾರ್ಯಕ್ರಮದಲ್ಲಿ ಮತ್ತು '' ಪ್ರಾದೇಶಿಕ ಸಮಾಚಾರದಲ್ಲಿ '' ಕನ್ನಡಕ್ಕೆ ಏನು ಅನ್ಯಾಯವಾಗುತ್ತಿದೆ, ಇದನ್ನು ಸರಿಪಡಿಸುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ:– ಸನ್ಮಾನ್ಯ ಅಧ್ಯಕ್ಷರೇ, ದೂರದರ್ಶನದಲ್ಲಿ 'ವಿಧಾನಮಂಡಲದಲ್ಲಿ ಇಂದು' ಎಂದು ಹೇಳತಕ್ಕಂಥ ಸುದ್ದಿ ಸುಮಾರು ಹತ್ತು ನಿಮಿಷಗಳಿಗಿಂತಲೂ ಹೆಚ್ಚಾಗಿ ಬರುತ್ತಿತ್ತು. ಆದರೆ, ಕೆಲವು ದಿವಸಗಳಿಂದ ಶ್ರೀಯುತ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಸದರಿ ಕಾರ್ಯಕ್ರಮವನ್ನು ಎರಡೂವರೆ ನಿಮಿಷಗಳಿಂದ ಮೂರು ನಿಮಿಷಗಳಿಗೆ ಇಳಿಸಿದ್ದಾರೆ. ಇದು ಬಹಳ ಅನ್ಯಾಯ. ಏಕೆಂದರೆ, ಇಷ್ಟು ದೊಡ್ಡ ಕರ್ನಾಟಕದ ವಿಷಯವನ್ನು ಹತ್ತು ನಿಮಿಷಗಳಲ್ಲಿ ಪ್ರಸಾರ ಮಾಡುವಂಥದ್ದು ಕಡಿಮೆ ಅವಧಿಯದಾಗಿದೆ. ಅದರಲ್ಲೂ, ಹತ್ತು ನಿಮಿಷಗಳ ಪ್ರಸಾರದಲ್ಲೂ ಕಡಿತ ಮಾಡಿರುವಂತಾದ್ದು, ಸರಿಯಿಲ್ಲ ಈ ರೀತಿ ಮಾಡದಂತೆ ಮತ್ತೆ 10 ನಿಮಿಷಗಳ ಕಾಲ ಪ್ರಸಾರವಾಗುವಂತೆ ಮಾಡಬೇಕು. ಅಲ್ಲದೆ, 7.30 ಗಂಟೆಗೆ ಪ್ರಸಾರವಾಗುವ ಕನ್ನಡ ವಾರ್ತೆಯಲ್ಲೂ ಕೂಡ ಕನ್ನಡ ನಾಡಿಗೆ ಸಂಬಂಧಪಟ್ಟ ವಿಷಯ ಕೇವಲ 2–3ನಿಮಿಷಗಳು ಮಾತ್ರವಿದ್ದು, ಉಳಿದೆಲ್ಲವೂ ಬೇರೆ ವಿಷಯವಾಗಿರುವುದರಿಂದ ಇನ್ನು 15–20 ನಿಮಿಷಗಳ ಕನ್ನಡ ಸಮಾಚಾರ ಅವಧಿಯನ್ನು ಮಾಡುವಂತೆ ಬೇರೆ ಸಂದರ್ಭ ಉಪಯೋಗಿಸಿ ಮಾಡತಕ್ಕಂಥ ಕಾರ್ಯದಲ್ಲಿ ಕೇಂದ್ರ ಸರ್ಕಾರದೊಡನೆ ವ್ಯವಹರಿಸುವಂಥ ಒಂದು ಕಾರ್ಯಕ್ರಮ ಮಾಡಿದರೆ ಕನ್ನಡ ನಾಡಿನ ಶಕ್ತಿಯನ್ನು ತೋರಿಸುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ವಿಧಾನಸಭೆಯ ನಡವಳಿಕೆಗಳನ್ನು ನೇರವಾಗಿ ಪ್ರಸಾರ ಮಾಡಬೇಕೆಂದು ಹೇಳುವಂಥದ್ದು ಕಳೆದ ಬಾರಿ ಸಭಾಧ್ಯಕ್ಷರಾಗಿದ್ದಂಥ ಶ್ರೀ ಕೃಷ್ಣಾರವರು ಅನುಕೂಲಕರವಾದಂಥ ಒಂದು ರೀತಿಯಲ್ಲಿ ವಿಚಾರ ಹೇಳುತ್ತಿದ್ದರು. ಅದುದರಿಂದ, ಬೇರೆ ಯಾವುದೇ ರೂಪದಿಂದಾದರೂ ಕೂಡ ವಿಧಾನಸಭೆಯ ನಡವಳಿಕೆಯನ್ನು ನೇರ ಪ್ರಸಾರ ಮಾಡುವ ಹಾಗೆ ಮಾಡಿದರೆ ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಸದನದಲ್ಲಿ ಸದಸ್ಯರುಗಳ ಹಾಜರಾತಿ ಸರಿಯಾಗಿ ಬರುತ್ತದೆ, ಒಳ್ಳೆಯ ರೀತಿಯಲ್ಲೂ ಬರುವುದಕ್ಕೆ ಸಾಧ್ಯವಾಗುತ್ತದೆ. ಇತರ ಎಲ್ಲಾ ವಿಚಾರಗಳನ್ನೂ ಕೂಡ ಈ ಸದನದಲ್ಲಿ ಏನಾಯಿತೆಂಬುದರ ಬಗ್ಗೆ ಇಡೀ ಕನ್ನಡ ನಾಡಿನ ಜನತೆಗೆ ಅವರ ಮನೆ–ಮನೆಗಳಿಗೆ ಬೇಗ ಮುಟ್ಟುತ್ತದೆ. ಇದಕ್ಕೆ ನನ್ನ ಸಹಮತವಿದ್ದು, ಆ ರೀತಿ ಆಗಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

† ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಪ್ರಜಾಪ್ರಭುತ್ವದಲ್ಲಿ ಸುದ್ದಿ ಮಾಧ್ಯಮಗಳಿಗೆ

ವಿಶೇಷವಾದಂಥ ಸ್ಥಾನವಿದೆ. ಅದನ್ನು ನಾವು Fourth Estate ಎಂದೂ ಕೂಡ ಕರೆಯುತ್ತೇವೆ. ಅದು ಪ್ರಿಂಟ್ ಮೀಡಿಯಾ ಇರಬಹುದು, ಎಲೆಕ್ಟ್ರಾನಿಕ್ ಮೀಡಿಯಾ ಇರಬಹುದು. ಇವೊತ್ತು ಪ್ರಿಂಟ್ ಮೀಡಿಯಾಗಿಂತ ಎಲೆಕ್ಟ್ರಾನಿಕ್ ಮೀಡಿಯಾ ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ. ಪ್ರತಿಯೊಂದು ಹಳ್ಳಿಗಳಲ್ಲೂ ಕೂಡ ಒಂದು ಕಡೆ ರೇಡಿಯೋ ಆಗಲಿ ಅಥವಾ ದೂರದರ್ಶನವಾಗಲಿ ನೋಡತಕ್ಕಂಥ, ಕೇಳತಕ್ಕಂಥ ಒಂದು ಅಭ್ಯಾಸವನ್ನು ಜನರು ಇಟ್ಟುಕೊಂಡಿದ್ದಾರೆ. ಇದಲ್ಲದೆ ಪ್ರಜಾಪ್ರಭುತ್ವದ, ಜನ ಪ್ರತಿನಿಧಿಗಳಾಗಿರತಕ್ಕ ನಾವುಗಳು ಇಲ್ಲಿ ಬಂದು ಏನು ಕೆಲಸ ಮಾಡುತ್ತೇವೆಂಬ ವಿಷಯವೂ ಸಹ ನಮ್ಮ ಕ್ಷೇತ್ರದ ಮತದಾರರಿಗೆ ಮುಟ್ಟಬೇಕಾಗಿರತಕ್ಕಂಥಾದ್ದು ಅತಿ ಅವಶ್ಯಕ. ಇದು ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಕೂಡ ಅವಶ್ಯಕವಾದುದಾಗಿದೆ. ಆದರೆ, ಇವೊತ್ತು ಇಲ್ಲಿ ಏನು ನಡೆಯತ್ತಿದೆಯೆಂದರೆ, ಅದು ಆಕಾಶವಾಣಿಯಾಗಿರಬಹುದು ಅಥವಾ ದೂರದರ್ಶನವಾಗಿರಬಹುದು, ಇವು ಪ್ರಜಾಪ್ರಭುತ್ವಕ್ಕೆ ಚ್ಯುತಿಯಾಗುವಂಥ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಅದೇ ರೀತಿ ಎಲ್ಲಿ ನೋಡಿದರೂ ಕೂಡ ಇದೇ ರೀತಿ ಆಗುತ್ತಿದೆ. ಅಲ್ಲದೆ, ಕಳೆದ ಬಾರಿ ನಾನು ಹೇಳಿದ್ದೇನೆ. ಏನೆಂದರೆ, ಈ 'ಹಿಂದಿ ಭಾಷೆ' ಎನ್ನುವ ವ್ಯಾಮೋಹ ಇವೊತ್ತಿನ ದಿವಸ ಈ ದೇಶದಲ್ಲೆಲ್ಲಾ ಪಸರಿಸಿ, ಕೊನೆಗೆ ಇದು ಎಲ್ಲಿಗೆ ಹೋಗಿ ಮುಟ್ಟುತ್ತದೆಂದರೆ, ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಸುದ್ದಿಯನ್ನು ಹಿಂದಿ ಮಾಧ್ಯಮದಲ್ಲಿ ಹೇಳತಕ್ಕಂಥ ಪರಿಸ್ಥಿತಿಯುಂಟಾಗುತ್ತದೆ. ಹಿಂದಿಯನ್ನು ನಮಗೆ ಬಲವಂತವಾಗಿ ಇಂಜೆಕ್ಷನ್ ಕೊಡುತ್ತಿದ್ದಾರೆ. ಮೊನ್ನೆ ದಿವಸ ನಾನು ಹೇಳಿದೆ: ಹಾಲು ಕುಡಿಯುವ ಮಗುವಿಗೂ ಕೂಡ 'ಹಿಂದಿ'ಯನ್ನು ಹಾಲಿನಲ್ಲಿ ಬೆರೆಸಿ ಕುಡಿಸತಕ್ಕಂಥ ಒಂದು ವ್ಯವಸ್ಥೆ ಬಹಳವಾಗಿ ನಡೆಯುತ್ತಿದೆ. ಇದಕ್ಕೆ ತೀವ್ರವಾಗಿ ನಾವು ಪ್ರತಿಭಟಿಸದೆ ಇರತಕ್ಕಂಥಾದ್ದು ನಮ್ಮ ಅಸಹಾಯಕತೆ ಎಂದು ಅವರು ತಿಳಿದುಕೊಂಡಿದ್ದಾರೆ. ಇದಕ್ಕೆ ತೀವ್ರತರವಾದ ರೀತಿಯಲ್ಲಿ ಪ್ರತಿಭಟಿಸಬೇಕಾದ ಅವಶ್ಯಕತೆಯಿದೆ. ಇದರಿಂದ ಈ ಸದನ ಎಚ್ಚೆತ್ತುಕೊಳ್ಳಬೇಕಾಗಿದೆ. ಕಾರಣವೇನೆಂದರೆ, ಒಂದು ಭಾಷೆಯನ್ನು ಮತ್ತೊಂದು ಭಾಷೆಗೆ ಹೇರತಕ್ಕಂಥಾದ್ದು ಮತ್ತು ಈ ಪ್ರಾದೇಶಿಕ ಭಾಷೆಗಳನ್ನು , ಕನ್ನಡ ಕೂಡ ರಾಷ್ಟ್ರೀಯ ಭಾಷೆಯಾಗಿದ್ದು, ಈ ರಾಷ್ಟ್ರೀಯ ಭಾಷೆಯನ್ನು ತುಳಿಯತಕ್ಕಂಥ ಒಂದು ವ್ಯವಸ್ಥೆ ಈ ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಏನು ನಡೆಯುತ್ತಿದೆ, ಇದನ್ನು ಈ ಸದನ ಖಂಡಿಸಬೇಕಾಗುತ್ತದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ನಮ್ಮ ದೇಶದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅಸ್ಸಾಂ ಸಮಸ್ಯೆಯೂ ಒಂದಿದ್ದು, ಇವೊತ್ತು ಭಾರತ ದೇಶದಲ್ಲಿ ಅಸ್ಸಾಂ ಸಮಸ್ಯೆ ಉದ್ಭವವಾಗುವುದಕ್ಕೆ ಕಾರಣ ಅಸ್ಸಾಂ ಜನರನ್ನು, ಅವರ ಭಾಷೆಯನ್ನು ಹಾಗೂ ಅವರ ಸಂಸ್ಕೃತಿಯನ್ನು ತುಳಿದಿದ್ದಕ್ಕಾಗಿ. ಅದೇ ರೀತಿ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ, ತಮಿಳು ಭಾಷೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕೆಂದು ತಮಿಳುನಾಡಿನ ವಿಧಾನಸಭೆಯಲ್ಲಿ ಒಂದು ನಿರ್ಣಯ ಅಂಗೀಕರಿಸಿದ್ದಾರೆ. ಅದೇರೀತಿಯಾದಂಥ ನಿರ್ಣಯವನ್ನು ನಾವು ಈ ಕರ್ನಾಟಕ ವಿಧಾನಸಭೆಯಲ್ಲಿ ಅಂಗೀಕರಿಸಬೇಕಾಗಿರತಕ್ಕಂಥಾದ್ದು, ಕನ್ನಡಕ್ಕೆ ಕರ್ನಾಟಕದಲ್ಲಿ ಅತ್ಯಂತ, ಉನ್ನತವಾದಂಥ ಗೌರಿಶಂಕರ ಶಿಖರಕ್ಕಿಂತ ಮೇಲಿನ ಸ್ಥಾನವನ್ನು ಕೊಡಬೇಕಾದಂಥ ಅವಶ್ಯಕತೆ ಇದೆ. ಇಲ್ಲದಿದ್ದರೆ ಇದೇ ರೀತಿ ನಮ್ಮಭಾಷೆ ಮೇಲೆ ಅನ್ಯ ಭಾಷೆ ಹೇರುತ್ತಾ ನಮ್ಮನ್ನು ತುಳಿಯುತ್ತಿದ್ದರೆ ಒಂದಲ್ಲ ಒಂದು ದಿವಸ ಸ್ಫೋಟವಾಗುತ್ತದೆ, ಆಗ ಮತ್ತೊಂದು ಸಮಸ್ಯೆ ಉದ್ಭವಾಗುತ್ತದೆ. ಆದುದರಿಂದ, ಈ ಕುರಿತು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟು ತಿಳಿಸಬೇಕಾಗಿರತಕ್ಕಂಥಾದ್ದು ರಾಜ್ಯ ಸರ್ಕಾರದ ಕೆಲಸವಾಗಿದೆ; ಮತ್ತು ಈ ಸದನದಲ್ಲೂ ಸಹ ಇದರ ಬಗ್ಗೆ ಒಂದು ನಿರ್ಣಯವನ್ನು ಅಂಗೀಕರಿಸಬೇಕಾದಂಥ ಅವಶ್ಯಕತೆ ಕೂಡ ಇದೆಯೆನ್ನತಕ್ಕ ಮಾತನ್ನು ನಾನು ಒತ್ತಿಹೇಳುತ್ತಿದ್ದೇನೆ. ಬರೀ ಸುದ್ದಿ ಮಾಧ್ಯಮದ ವಿಚಾರವಲ್ಲ, ಅದರಲ್ಲಿ ಬರತಕ್ಕಂಥ ಕಾರ್ಯಕ್ರಮಗಳನ್ನು ನೋಡಿದರೆ ಅನೇಕ ಸಾರಿ ಕಣ್ಣಲ್ಲಿ ನೀರು ಬರುತ್ತದೆ. ಕನ್ನಡವನ್ನು ಕಾಲಿನಲ್ಲಿ ತುಳಿಯತಕ್ಕಂಥ ವ್ಯವಸ್ಥೆಯನ್ನು ನಾವು ಪ್ರತಿ ದಿವಸ ನೋಡುತ್ತಿದ್ದೇವೆ. ಇವೊತ್ತು ಕನ್ನಡಿಗರಾದ ಅನೇಕ

ಕಲಾವಿದರಿದ್ದಾರೆ, ಅನೇಕ ಕನ್ನಡಿಗರು ಉತ್ತಮವಾದಂಥ ಕಾರ್ಯಕ್ರಮಗಳನ್ನು ತಯಾರು ಮಾಡತಕ್ಕಂಥವರು ಇದ್ದಾರೆ. ಅವರಿಗೆ ಯಾವುದೇ ಪ್ರಾಧಾನ್ಯತೆ ಸಿಗುತ್ತಿಲ್ಲ.

ಆಕಾಶವಾಣಿಯ ಮತ್ತು ದೂರದರ್ಶನ ಭವನದ ಸುತ್ತಮುತ್ತ ಓಡಾಡಿಕೊಂಡಿರುತ್ತಾರಲ್ಲಾ ಅವರಿಗೆ ಮಾತ್ರ ಅವಕಾಶ ಸಿಗುತ್ತದೆ. ಎಲ್ಲಿ ನೋಡಿದರೂ ದೆಹಲಿಮಯ, ಹಿಂದಿಮಯ ಆಗಿಬಿಟ್ಟಿರುವುದರಿಂದ ಇವತ್ತು ನಮ್ಮ ಪ್ರಾದೇಶಿಕ ಭಾಷೆಗೆ, ರಾಜ್ಯಗಳ ಭಾಷೆಯನ್ನು ತುಳಿಯತಕ್ಕ ಮತ್ತು ಆ ಪ್ರಾದೇಶಿಕ ಕಲೆಗೆ ಮತ್ತು ಸಂಸ್ಕೃತಿಗೆ ಅಪಚಾರವನ್ನು ತರತಕ್ಕ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಈ ವರ್ತನೆಯನ್ನು ಸದನ ಖಂಡಿಸಬೇಕಾಗುತ್ತದೆ ಮತ್ತು ಇದರ ಬಗ್ಗೆ ಒಂದು ನಿರ್ಣಯವನ್ನು ಅಂಗೀಕಾರ ಮಾಡಬೇಕಾದ ಅವಶ್ಯಕತೆ ಇದೆ. ದಯಮಾಡಿ ಆ ಒಂದು ನಿರ್ಣಯವನ್ನು ಸರ್ಕಾರ ತರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನೀವೇನಾದರೂ ಅದನ್ನು ತರುವುದರಲ್ಲಿ ಮರೆತರೆ ನಾವು ೫ ಜನರಿರಬಹುದು ಇಲ್ಲವೇ ಇಪ್ಪತ್ತೇ ಜನರಿರಬಹುದು; ಆ ಒಂದು ನಿರ್ಣಯವನ್ನು ನಾವು ತರುತ್ತೇವೆ. ಅದರ ಪರವಾಗಿ ನಾವು ಕೈಯನ್ನು ಎತ್ತುತ್ತೇವೆ. ಆದುದರಿಂದ ಅದಕ್ಕೆ ತಾವು ಅವಕಾಶ ಮಾಡಿಕೊಡಬೇಡಿ. ಕನ್ನಡಕ್ಕೆ ಏನು ಅನ್ಯಾಯವಾಗಿದೆ ಅದನ್ನು ಪ್ರತಿಭಟಿಸದಿದ್ದರೆ ಅದರ ಹೊಣೆಗೆ ನೀವು ಜವಾಬ್ದಾರರಾಗುತ್ತೀರಿ. ಆ ರೀತಿ ಆಗುವುದಕ್ಕೆ ಬಿಡಬೇಡಿ ಎಂದು ಮನವಿ ಕೊಳ್ಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶಗಳಲ್ಲಿ ಒಂದೆರಡು ಕಡೆ ಟಿ.ವಿ. ಇದ್ದರೂ ಸಹ ಅಲ್ಲಿ ನೂರಾರು ಜನರು ಒಂದು ಕಡೆ ಸೇರಿ ''ವಿಧಾನ ಮಂಡಲದಲ್ಲಿ ಇಂದು'' ಎಂಬ ಕಾರ್ಯಕ್ರಮವನ್ನು ನೋಡಿ ವಿಚಾರವನ್ನು ತಿಳಿದುಕೊಳ್ಳತಕ್ಕ ಪ್ರಯತ್ನಮಾಡುತ್ತಿದ್ದಾರೆ. ಆದ್ದರಿಂದ ಈ ವಿಧಾನಮಂಡಲದಲ್ಲಿ ಇಂದು ಎನ್ನುವ ಕಾರ್ಯಕ್ರಮದ ಸಮಯವನ್ನು ಜಾಸ್ತಿ ಮಾಡುವುದರಿಂದ ರೈತರಿಗೆ, ಬಡವರಿಗೆ, ಹರಿಜನ ಗಿರಿಜನ ಬಂಧುಗಳಿಗೆ ಆಗಬೇಕಾದಂಥ ಕೆಲಸವನ್ನು ಮಾಡುವುದರಲ್ಲಿ ಸರ್ಕಾರ ಏನು ತೀರ್ಮಾನವನ್ನು ತೆಗೆದಕೊಳ್ಳುತ್ತದೆ ಎನ್ನುವ ಅರಿವು ಅವರಿಗೆ ಉಂಟಾಗುತ್ತದೆ. ಏಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ನೂರಕ್ಕೆ ತೊಂಭತ್ತು ಜನರು ಪತ್ರಿಕೆಗಳನ್ನು ಓದುವುದಿಲ್ಲ. ಆದ್ದರಿಂದ ವಿಶೇಷವಾಗಿ ಅಧಿವೇಶನವು ನಡೆಯತಕ್ಕ ಸಂದರ್ಭದಲ್ಲಿ ಅಲ್ಲಿನ ಜನರೆಲ್ಲರೂ ಒಟ್ಟಾಗಿ ಕುಳಿತುಕೊಂಡು ನಮಗೆ ಏನು ಸವಲತ್ತು ಸಿಕ್ಕಿದೆ ಎಂಬುದನ್ನು ನೋಡುವ ವಾಡಿಕೆಯನ್ನು ಇಟ್ಟುಕೊಂಡಿದ್ದಾರೆ ಮತ್ತು ನಮ್ಮ ಶಾಸಕರು ಏನು ಕೆಲಸ ಮಾಡತ್ತಾರೆ, ನಮ್ಮ ಸಮಸ್ಯೆ ಏನು ಇದೆ ಅದನ್ನು ಸರ್ಕಾರ ಎಷ್ಟರಮಟ್ಟಿಗೆ ಬಗೆಹರಿಸುತ್ತದೆ. ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಕಛೇರಿಗೆ ಭೇಟಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಮತ್ತೆ ಕೇಂದ್ರ ಸರ್ಕಾರವೂ ಕೂಡ ನಮ್ಮ ರಾಜ್ಯದ ಜೊತೆ ಸಂಪರ್ಕ ಮಾಡದೆ ಏಕಾಏಕಿ ಹತ್ತು ನಿಮಿಷವಿದ್ದ ಈ ಕಾರ್ಯಕ್ರಮದ ಅವಧಿಯನ್ನು ಎರಡೂವರೆ ನಿಮಿಷಕ್ಕೆ ಏತಕ್ಕೆ ಇಳಿಸಿದರೋ ನನಗೆ ಗೊತ್ತಿಲ್ಲ. ಈ ಕಾರ್ಯಕ್ರಮಕ್ಕೆ ಇನ್ನೂ ಹೆಚ್ಚು ಸಮಯವನ್ನು ಕೊಡಬೇಕಾಗಿದೆಯೇ ಹೊರತು ಅದನ್ನು ಏಕೆ ಕಡಿಮೆ ಮಾಡಿದ್ದಾರೋ ಗೊತ್ತಿಲ್ಲ, ಇದು ಸಾಧುವಾದ ಕೆಲಸವಲ್ಲ. ಆದ್ದರಿಂದ ದಯಮಾಡಿ ಮುಖ್ಯಮಂತ್ರಿಗಳು ಸಂಬಂಧಪಟ್ಟ ಇಲಾಖೆಯವರ ಜೊತೆ ಸಂಪರ್ಕ ಮಾಡಿ ತಕ್ಷಣ ಅಂದರೆ ನಾಳೆ ಇಲ್ಲವೇ ನಾಡಿದ್ದು ಒಳಗಾಗಿ ಮೊದಲು ಇದ್ದಂತೆ ಹತ್ತು ನಿಮಿಷವನ್ನು ಈ ಕಾರ್ಯಕ್ರಮಕ್ಕೆ ಇರುವಂತೆ ಮಾಡಬೇಕು ಮತ್ತು ಅದಕ್ಕೆ ಇನ್ನೂ ಹೆಚ್ಚು ಸಮಯವನ್ನು ಕೊಡುವಂತೆ ಮಾಡಬೇಕು ಮತ್ತು ಅದೇ ರೀತಿಯಲ್ಲಿ ಆಕಾಶವಾಣಿಯಲ್ಲಿಯೂ ಸಹ ಇದಕ್ಕೆ ಸೂಕ್ತವಾದಂಥ ಸಮಯವನ್ನು ಕೊಡಬೇಕು. ಇದನ್ನು ವರದಿ ಮಾಡುವಾಗ ಸ್ಪಷ್ಟವಾಗಿ ವರದಿ ಮಾಡಬೇಕು. ಅವರು ವರದಿಯನ್ನು ಮಾಡುವಾಗ ಕೆಲವು ಸಂದರ್ಭಗಳಲ್ಲಿ ಹೆಸರನ್ನು ಸ್ವಲ್ಪ ಸರಿಯಾಗಿ ಹೇಳುವುದಿಲ್ಲ ಮತ್ತು ಇಲ್ಲಿನ ಪೂರ್ಣವಾದ ವರದಿಯ ವಿವರವನ್ನ ಕೊಡಲು ಆಗುವುದಿಲ್ಲ, ಇದು ಜನರಿಗೆ ಅದರಲ್ಲಿಯೂ ಮುಖ್ಯವಾಗಿ ಗ್ರಾಮಾಂತರ ಭಾಗದ ಜನರಿಗೆ ಅರ್ಥವಾಗುವುದಿಲ್ಲ, ಆದ್ದರಿಂದ ಸರಿಯಾದ ರೀತಿಯಲ್ಲಿ ವರದಿಯನ್ನು ಕೊಡುವುದರ

ಬಗ್ಗೆ ಕೂಡ ವಿಶೇಷವಾದ ಗಮನಹರಿಸಿ ಮತ್ತು ಈ ಕಾರ್ಯಕ್ರಮದ ಅವಧಿಯನ್ನು ೧೦ ನಿಮಿಷಕ್ಕೆ ಏರಿಸುವಲ್ಲಿ ಮುಖ್ಯಮಂತ್ರಿಗಳು ವಿಶೇಷವಾದ ಪ್ರಯತ್ನ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

† ಶ್ರೀ ಬಾಬಾಗೌಡ ಆರ್. ಪಾಟೀಲ್:– ಸನ್ಮಾನ್ಯ ಅಧ್ಯಕ್ಷರೇ, ಜನರಲ್ಲಿ ಚಿಕ್ಕ ಚಿಕ್ಕ ಬುದ್ಧಿವಂತಿಕೆಯನ್ನು ಬೆಳೆಸುವುದರ ಮೂಲಕ ಪ್ರಜಾಪ್ರಭುತ್ವದಲ್ಲಿ ಅದರ ಗುಣಮಟ್ಟವನ್ನು ಹೆಚ್ಚಿಸಬೇಕಾದ ಅವಶ್ಯಕತೆ ಇದೆ. ಟಿ.ವಿ.ಯಲ್ಲಿ ಮತ್ತು ಆಕಾಶವಾಣಿಯಲ್ಲಿ ಇಲ್ಲಿನ ಕಾರ್ಯಕ್ರಮದ ಬಗ್ಗೆ ಪ್ರಸಾರ ಮಾಡುವಾಗ ಇಂಥ ಚರ್ಚೆಯಾಗಿದೆ ಎಂದು ಒಂದೇ ಒಂದು ವಾಕ್ಯದಲ್ಲಿ ಹೇಳಿಬಿಡುತ್ತಾರೆ. ನಮಗೆ ನೇರವಾಗಿ ಸಂಬಂಧಪಟ್ಟ ವಿಚಾರಗಳಲ್ಲಿ ಇಲ್ಲಿ ಏನು ನಡೆಯಿತು, ಅದಕ್ಕೆ ಏನು ವಿವರಣೆ ಹೇಳಿದರು, ಅದು ಸರಿಯೇ ಅಥವಾ ಅಲ್ಲವೇ, ಇದು ತಪ್ಪೋ ಅದು ಒಪ್ಪೋ ಎನ್ನತಕ್ಕ ಚಿಕ್ಕ ಚಿಕ್ಕ ಬುದ್ಧಿವಂತಿಕೆಯನ್ನು ಜನರಲ್ಲಿ ಬೆಳೆಸಿದರೆ ಇನ್ನು ಮುಂದೆ ಬರತಕ್ಕ ಜನರೆದರು ಸರಿಯಾದ ಅಭಿಪ್ರಾಯವನ್ನು ಕೊಡಲು ಸಾಧ್ಯವಾಗುತ್ತದೆ. ಆ ಕಾರಣದಿಂದ ಮಾನ್ಯ ಮುಖ್ಯಮಂತ್ರಿಗಳು ಈ ಕಾರ್ಯಕ್ರಮದ ಅವಧಿಯನ್ನು ೧೦ ನಿಮಿಷಕ್ಕೆ ಏರಿಸುವಲ್ಲಿ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮೋಟಮ್ಮ:– ಸನ್ಮಾನ್ಯ ಅಧ್ಯಕ್ಷರೇ, ಶಾಸನ ಸಭೆಯ ಕಾರ್ಯಕಲಾಪಗಳನ್ನು ದೂರದರ್ಶನದಲ್ಲಿ ಪ್ರಸಾರ ಮಾಡುವುದರಿಂದ ನಿಮಗೇ ಹೆಚ್ಚು ಸಹಾಯವಾಗುತ್ತದೆ. ಏಕೆಂದರೆ ಟಿ.ವಿ.ಯಲ್ಲಿ ಶಾಸನ ಸಭೆಯ ಕಾರ್ಯಕಲಾಪಗಳನ್ನು ಪ್ರಸಾರ ಮಾಡುತ್ತೇವೆಂದರೆ ಶಾಸಕರ ಹಾಜರಾತಿ ಜಾಸ್ತಿಯಾಗುತ್ತದೆ. ನಮ್ಮ ಕ್ಷೇತ್ರದಲ್ಲಿ ಜನರು ನಮ್ಮ ಶಾಸಕರು ಶಾಸನ ಸಭೆಗೆ ಹಾಜರಾಗಿದ್ದಾರೋ ಅಥವಾ ಇಲ್ಲವೋ, ಏನು ಪ್ರಶ್ನೆಯನ್ನು ಕೇಳಿದರು ಎಂಬುದನ್ನು ಗಮನಿಸುತ್ತಾರೆ. ಆ ದೃಷ್ಟಿಯಲ್ಲಿ ಶಾಸನ ಸಭೆಯಲ್ಲಿ ಏನು ಒಂದು ಕೋರಂ ಕೊರತೆ ಇದೆ ಅದು ಸಿಗುತ್ತದೆ. ಆದ್ದರಿಂದ ಪಾರ್ಲಿಮೆಂಟ್‌ನಲ್ಲಿರುವಂತೆ ಇಲ್ಲೂ ಸಹ ಶಾಸನ ಸಭೆಯ ವರದಿಯನ್ನು ನೇರವಾಗಿ ಟಿ.ವಿ.ಯಲ್ಲಿ ಪ್ರಸಾರ ಮಾಡುವುದರಿಂದ ಒಳ್ಳೆಯದಾಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಯವರು):– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರುಗಳು ಟಿ.ವಿ. ಕಾರ್ಯಕ್ರಮದ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಅದು ಟಿ.ವಿಯಲ್ಲಿ ಪ್ರಾದೇಶಿಕ ಸಮಾಚಾರದ ಬಗ್ಗೆ ಇರಬಹುದು ಅಥವಾ ಯಾವುದೇ ಪ್ರಾದೇಶಿಕ ಕಾರ್ಯಕ್ರಮದ ಬಗ್ಗೆ ಇರಬಹುದು. ಅಂಥ ಕಾರ್ಯಕ್ರಮಕ್ಕೆ ಹೆಚ್ಚು ಸಮಯವನ್ನು ಕೊಡಬೇಕು, ಈಗ ಕೊಡುತ್ತಿರುವ ಸಮಯ ಕಡಿಮೆಯಾಗಿದೆ ಎನ್ನತಕ್ಕ ಸಾಮಾನ್ಯ ದೂರನ್ನು ನೀಡಿದ್ದಾರೆ. ಇದರ ಬಗ್ಗೆ ನಾನು ಕೇಂದ್ರ ವಾರ್ತಾ ಸಚಿವರಾದ ಮಾನ್ಯ ಸಿಂಗ್‌ದೇವ್‌ರವರ ಜೊತೆಯಲ್ಲಿ ಕೇವಲ ಹತ್ತು ದಿನಗಳ ಹಿಂದೆಯಷ್ಟೇ ಮಾತನಾಡಿದ್ದೇನೆ.

ನನ್ನ ಹಾಗೇ ಇನ್ನೂ ಅನೇಕ ರಾಜ್ಯಗಳ ಮುಖ್ಯ ಮಂತ್ರಿಗಳು ಇದರ ಬಗ್ಗೆ ಚರ್ಚೆಮಾಡಿದ್ದಾರೆ. ಕೇಂದ್ರದ ಮಂತ್ರಿಗಳೂ ಕೂಡ ಎಲ್ಲಾ ಮುಖ್ಯಮಂತ್ರಿಗಳ ಜೊತೆ ಚರ್ಚೆಮಾಡಬೇಕು. ಪ್ರಾದೇಶಿಕ ಕಾರ್ಯಕ್ರಮಗಳಿಗೆ, ಸಮಾಚಾರಗಳಿಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಡಬೇಕೆಂಬ ವಿಚಾರದ ಬಗ್ಗೆ ಅವರು ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ. ಈ ಬಗ್ಗೆ ಯಾವ ರೀತಿ ಮಾಡಬಹುದೆಂದು ನಮ್ಮ ಸಲಹೆಗಳನ್ನು ಕೇಳಿದ್ದಾರೆ. ಅದನ್ನು ನಾನು ವರ್ಕೌಟ್ ಮಾಡುತ್ತಿದ್ದೇನೆ. ನಮ್ಮ ಪ್ರಾದೇಶಿಕ ಕಾರ್ಯಕ್ರಮಗಳಿಗೆ ಮತ್ತು ಸಮಾಚಾರಗಳಿಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಡಬೇಕೆಂಬ ಬಗ್ಗೆ ಇನ್ನು ಒಂದೆರಡು ದಿವಸಗಳಲ್ಲಿ ಕೇಂದ್ರದ ವಾರ್ತಾ ಮಂತ್ರಿಗಳಿಗೆ ಪತ್ರ ಬರೆಯುತ್ತಿದ್ದೇನೆ. ತಾವು ತಮ್ಮ ತಮ್ಮ ಸಲಹೆಗಳನ್ನು ಸೂಕ್ತ ಕಾಲದಲ್ಲಿ ಕೊಟ್ಟಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:– ಸದನದ ಕಾರ್ಯಕಲಾಪಗಳನ್ನು ನೇರವಾಗಿ ಪ್ರಸಾರ ಮಾಡುವುದಕ್ಕೆ...

ಶ್ರೀ ವೀರಪ್ಪಮೊಯಿಲಿ:– ಅದನ್ನೂ ಸೇರಿಸಿ ಬರೆಯುತ್ತೇನೆ.

3. ನಂಜನಗೂಡು ತಾಲ್ಲೂಕಿನಲ್ಲಿ ಆನೆಗಳ ಕಾಟ.

ಶ್ರೀ ಎಂ. ಮಹಾದೇವ್ (ನಂಜಗೂಡು):– ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಆನೆಗಳ ಕಾಟ ಜಾಸ್ತಿ. ನಾವು ನಮ್ಮ ಕ್ಷೇತ್ರಕ್ಕೆ ಹೋಗುವುದಕ್ಕಾಗುತ್ತಿಲ್ಲ. ಜನರು ನಮ್ಮನ್ನು ಕಾಯುತ್ತಿದ್ದಾರೆ. ಆನೆಗಳ ಕಾಟವನ್ನು ತಪ್ಪಿಸದೆ ಈ ಸದನದಲ್ಲಿ ಮಾಡುವ ಚರ್ಚೆಯಾದರೂ ಏನು? ನಮಗೆ ಗಮನ ಸೆಳೆಯುವ ಸೂಚನೆಗೂ ಅವಕಾಶವಿಲ್ಲ, ಪ್ರಶ್ನೆ ಕೇಳುವುದಕ್ಕೂ, ಅವಕಾಶವಿಲ್ಲವೆಂದರೆ ನಾವು ಏನು ಮಾಡಬೇಕು? ಅಲ್ಲಿ ಆನೆಗಳು ಜನರನ್ನು ತುಳಿದು ಸಾಯಿಸುತ್ತಿವೆ. ಬೆಳೆಯನ್ನು ನಾಶಮಾಡುತ್ತಿವೆ. ಇದಕ್ಕೆ ಪರಿಹಾರ ಏನೂ ಇಲ್ಲ. ಆದ್ದರಿಂದ ಇದರ ಬಗ್ಗೆ ಚರ್ಚೆಮಾಡಲು ನನಗೆ ಕಾಲಾವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ನಮಗೆ ಆನೆಗಳ ಕಾಟ ಜಾಸ್ತಿ ಇರುವುದರಿಂದ ನಮಗೆ ರಕ್ಷಣೆ ಕೊಡಿ ಎಂದು ಮಾನ್ಯ ಅಧ್ಯಕ್ಷರ ಮೊರೆ ಹೋದರೆ ಏನು ಮಾಡುವುದು? ಆನೆಗಳು ಅವರ ಪಕ್ಕದಲ್ಲೇ ಬರುತ್ತಿವೆ. ತಾವು ಯಾವರೀತಿ ರಕ್ಷಣೆಯನ್ನು ಕೊಡಬೇಕೋ ಅದನ್ನು ಕೊಡದಿದ್ದರೆ ನಮ್ಮ ಗತಿ ಏನು? ನಮಗೆ ನೀವೇ ರಕ್ಷಣೆ ಕೊಡುವವರು. ದಯವಿಟ್ಟು ಅಲ್ಲಿ ಆನೆಗಳ ಕಾಟ ತಪ್ಪಿಸಿ ಇಲ್ಲದಿದ್ದರೆ ಅವರನ್ನು ಮಂತ್ರಿಯನ್ನಾಗಿ ಮಾಡಿ.

ಶ್ರೀ ಎಂ. ಮಹದೇವ್:– ಊರಿಗೆ ಹೋದರೆ ೪ ಕಾಲಿನ ಆನೆಗಳ ಕಾಟ, ಇಲ್ಲಿ ಇದ್ದರೆ ೨ ಕಾಲಿನ ಆನೆಗಳ ಕಾಟ. ನಾವು ಯಾವ ಕಾಟ ತಡೆದುಕೊಳ್ಳಲು ಆಗುತ್ತದೆ? ದಯವಿಟ್ಟು ಮಾತನಾಡಲು ನಮಗೆ ಅವಕಾಶ ಕೊಡಿ.

ಅಧ್ಯಕ್ಷರು:– ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಮಹದೇವ್:– ಇತ್ತೀಚೆಗೆ ನಾನು ಊರಿಗೆ ಹೋಗಿದ್ದೆ. ಅಲ್ಲಿ ನಷ್ಟಕ್ಕೊಳಗಾದ ಜನರಿಗೆ ಪರಿಹಾರವನ್ನು ಕೊಟ್ಟಿಲ್ಲ. ಒಂದುಕಡೆ ಬೆಳೆ ಹಾನಿ, ಇನ್ನೊಂದು ಕಡೆ ಜೀವಹಾನಿಯಿಂದ ಜನರು ಬಹಳ ತೊಂದರೆ ಪಡುತ್ತಿದ್ದಾರೆ. ಈಗ ಮತ್ತೆ ನಾನು ನನ್ನ ಕ್ಷೇತ್ರಕ್ಕೆ ಹೋಗುವಂತಿಲ್ಲ. ಈ ಸದನ ೨೩ನೇ ತಾರೀಖು ಮುಗಿಯುತ್ತದೆ. ಆದ್ದರಿಂದ ದಯವಿಟ್ಟು ಚರ್ಚೆಗೆ ಅವಕಾಶಕೊಡಿ.

ಅಧ್ಯಕ್ಷರು:– ತಮ್ಮ ಹತ್ತಿರಕ್ಕೆ ಬಿಳಿ ಆನೆಯನ್ನು ಕಳುಹಿಸಿಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ರೈತರು ಸಹಕಾರ ಸಂಘಗಳಲ್ಲಿ ತೆಗೆದುಕೊಂಡಿರುವ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ ಇವತ್ತು ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಒಂದು ಭರವಸೆಯನ್ನು ಕೊಟ್ಟಿದ್ದರು.

ಶ್ರೀ ಎಂ. ವೀರಪ್ಪಮೊಯಿಲಿ:– ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಇವತ್ತೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಇನ್ನು ೨–೩ ದಿವಸದಲ್ಲಿ ತಮಗೆ ಹೇಳಿಕೆ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ:– ನಮ್ಮ ಕಡೆಯವರನ್ನೂ, ನಿಮ್ಮ ಕಡೆಯವರನ್ನೂ ಕರೆದು ಸಲಹೆಗಳನ್ನು